ಇಳಿದ ನೀರು ನಡುವೆ ಬಿರುಕು ಕಂಡ ಜಾಗಗಳಿಂದ ಜಿನುಗಿ ಮನೆಯೊಳಗೆ ನುಗ್ಗುತ್ತಲಿತ್ತು. ಅರ್ಧ ರಾತ್ರಿಯ ಹೊತ್ತಿಗೆ ಮನೆ ನೀರಿನ ತೊಟ್ಟಿಯಂತಾಗಿ ಹೋಗಿತ್ತು. ಪಾದಗಳು ಮುಳುಗುವ ಮಟ್ಟಕ್ಕೆ ನೀರು ತುಂಬಿಕೊಂಡಿತ್ತು. ಇದ್ದ ಒಂದಷ್ಟು ಕಾಳುಗಳ ಮೂಟೆಗಳನ್ನು ದಿವಾನದ ಮೇಲಿಟ್ಟು ಅದರ ಮೇಲೆ ಒಂದು ಪ್ಲಾಸ್ಟಿಕ್ ಕವರನ್ನು ಹಾಸಿದ್ದಳು. ಹಾಗೆ ಹಾಸುವಾಗ ಒಂದು ದೊಡ್ಡ ಕವರನ್ನು ತಂದು ಮನೆಯ ಮೇಲೆ ಹಾಕಿದ್ದಿದ್ದರೆ ತನಗೆ ಈ ಅವಸ್ಥೆ ಬರುತ್ತಿರಲಿಲ್ಲವೇನೊ ಎಂದುಕೊಂಡಳು. ಊರಿನಲ್ಲಿ ಒಂದಷ್ಟು ಹಳೆಯ ಮನೆಗಳವರು ಜೋರು ಮಳೆಯ ಸೂಚನೆ ಸಿಕ್ಕೊಡನೆ ಪಟ್ಟಣಕ್ಕೆ ತೆರಳಿ ಬೇಕಾದಷ್ಟು ಪ್ಲಾಸ್ಟಿಕ್ ಕವರನ್ನು ತಂದು ಮನೆಯ ಮೇಲೆ ಹಾಸಿ ಅದರ ಮೇಲೆ ಕಲ್ಲುಗಳನ್ನು ಇಟ್ಟು ಭದ್ರಪಡಿಸಿದ್ದರು. ಶಾರದಮ್ಮಳೂ ತನ್ನ ಭಾವನ ಮಗ ನಾಗರಾಜನ ಬಳಿ ಒಂದಷ್ಟು ಕವರನ್ನು ತಂದುಕೊಡಲು ಹೇಳಿದ್ದಳು. ಹಾಗೂ ಹಣವನ್ನು ಒಂದೆರಡು ವಾರಗಳಲ್ಲಿ ಕೊಡುವುದಾಗಿ ತಿಳಿಸಿದ್ದಳು. ಅವಳ ಆರ್ಥಿಕ ಸ್ಥಿತಿ ಅಷ್ಟೊಂದು ಹದಗೆಟ್ಟು ಹೋಗಿತ್ತು. ಬಡ್ಡಿ ವ್ಯವಹಾರದಲ್ಲಿ ಪಳಗಿದ್ದ ನಾಗರಾಜ 'ನಂಕೇನೂ ಬೇರೆ ಪಂಗಿಲ್ಲ. ಊರ್ನ ಉಸಾಬ್ರಿ ನೋಡ್ಕಂಡಿದ್ರೆ ನನ ಮನೇನ ಯಾರ್ ನೋಡ್ತಾರೆ. ಎಲ್ಲಾ ನೀ ಮಾಡ್ಕಂಡಿರೋದೆ... ಮಗುಳ್ನೆ ಸರಿಯಾಗಿ ಬೆಳುಸಕ್ಕಾಗ್ಲಿಲ್ಲ ನಿಂಕೆ. ಅನುಬೋಸು' ಎನ್ನುತ್ತಾ ತನ್ನ ದಾರಿ ಹಿಡಿದಿದ್ದ.

ಶಾರದಮ್ಮ ಬಹಳ ಹೊತ್ತು ತನ್ನ ಮನೆಯ ಮುಂದೆ ನಿಂತೇ ಇದ್ದಳು. ಅವಳ ಅರೆ ನೆರೆತ ಕೂದಲ ತುದಿಯಿಂದ ನೀರು ನಿಧಾನಕ್ಕೆ ಜಿನುಗುತ್ತಲಿತ್ತು. ಅವಳ ತಲೆಯೇ ಬೆಟ್ಟದಂತಾಗಿತ್ತು. ಹಾಗೆ ಜಿನುಗುತ್ತಲಿತ್ತು. ಮೂಗಿನ ತುದಿಯಲ್ಲಿ ಅಪರಿಮಿತವಾದ ಕೋಪ ಮಡುಗಟ್ಟಿ ಕುಳಿತಿರುವಂತೆ ಭಾಸವಾಗುತ್ತಿತ್ತು. ಅದಕ್ಕೆ ತಕ್ಕಂತೆ ಅವಳ ದಪ್ಪಗಿನ ಕೆಳದುಟಿ ಕಂಪಿಸುತ್ತಲಿತ್ತು. ಕೆನ್ನೆ, ಹಣೆ ಕಳೆಗುಂದಿ ಆ ಅಂತಹ ಮಳೆಯಲ್ಲೂ ಬಾಡಿದಂತೆ ಕಾಣುತ್ತಲಿದ್ದವು. ಒಮ್ಮೆ ತನ್ನ ಮನೆಯ ಕಡೆ ತಿರುಗಿ ನೋಡಿದಳು. ಬಾಗಿಲ ಇಕ್ಕೆಲದ ಗೋಡೆಯ ಪದರು ಒಂದಷ್ಟು ಕಡೆ ಕಿತ್ತು ಬಂದಿತ್ತಾದ್ದರಿಂದ ಗಾಯಗಳಂತೆ ಕಾಣತೊಡಗಿತು. ಮನೆಯ ಹಿಂಭಾಗಕ್ಕೆ ಸಂಪೂರ್ಣ ಕಿತ್ತುಕೊಂಡೇ ಹೋಗಿತ್ತು. ಮಳೆಗೆ ಮೊದಲೆ ಬಿಸಿಲು ಗಾಳಿಗೆ ಸಾಕಷ್ಟು ಕಿತ್ತುಹೋಗಿದ್ದ ಗೋಡೆಯ ಪದರು, ಮಳೆ ಶುರುವಿಟ್ಟುಕೊಂಡ ಮೇಲೆ ಮತ್ತಷ್ಟು ಹುರುಪಿನಿಂದಲೆ ಜಾರುತ್ತಲಿತ್ತು. ಶಾರದಮ್ಮನಿಗೆ ತನ್ನ ಮನೆಯ ಚಿತ್ರಣ ಕಣ್ಣಮುಂದೆ ಬಂದಾಗಲೆಲ್ಲ ನರಿಗಳ ದಾಳಿಗೆ ಸಿಕ್ಕ ಕುರಿಯ ಕಳೇಬರದಂತೆ ಕಾಣುವುದುಂಟು. ಅವಳು ಸತತವಾಗಿ ಊರನ್ನು ಆಳುತ್ತಿರುವ ಪಂಚಾಯತಿ ಮೆಂಬರ್ ಕೆಂಪಿರೆಡ್ಡಿಯನ್ನು ನೆನಸಿಕೊಳ್ಳುವುದಕ್ಕೂ ಅವನು ಅದೇ ದಾರಿಯಲ್ಲಿ 'ಏ ಬಿಡ್ತಾ... ಇದಿ ನಾ ಅಡ್ಡ' ಎಂದು ಹಾಡಿಕೊಂಡು ಕೊಡೆ ಹಿಡಿದು ಸಾಗುವುದಕ್ಕೂ ತಾಳೆಯಾಗಿತ್ತು. ರಾತ್ರಿಯಿಂದ ಅದುಮಿಟ್ಟುಕೊಂಡಿದ್ದೆಲ್ಲವೂ ಒಮ್ಮೆಲೆ ಸ್ಫೋಟಗೊಂಡಿತೇನೊ ಎಂಬಂತೆ ಶಾರದಮ್ಮ 'ನನ ಮನಿ ಅವಾಂತರಾನ ಒಂದ್ಸಾರಿ ಸೂಪಾಕೋಗಲೆ ಕೆಂಪೋನೆ. ನಾಕು ವರ್ಸದಿಂದ ಅರ್ಜಿ ಆಕ್ತಾಲೆ ಅವುನಿ. ಊರುನಾಕ ಬಂಗ್ಲ ಇರೋರ್ಕೆಲ್ಲ ದುಡ್ಡು ಕೊಡಿಸ್ದೆ. ನಾ ಏನ್ಲ ಮಾಡ್ದೆ ನಿಂಕೆ. ನಿನ ಮನಿತಾವ ಬಂದು ಏನಾರ ವತ್ಕಂಡು ವೋದ್ನ? ಇಲ್ಲಲ್ಲ. ಮತ್ಯಾಕ್ಲ ಬೋಸುಡಿ ನನ ಮೇಕೆ ಅಂಗೆ ಪಗ' ಗುಡುಗಿದಳು.

ಕೆಂಪಿರೆಡ್ಡಿ ಒಂದು ಕ್ಷಣ ಶಾರದಮ್ಮನ ಕಡೆಗೇ ನೋಡತೊಡಗಿದ. ಇಡೀ ಊರಿನಲ್ಲಿ ತನಗೆ ಮತ್ತು ತನ್ನ ಕೆಲಸಗಳಿಗೆ ಎದುರು ಮಾತನಾಡುವವಳು ಇವಳೊಬ್ಬಳೇ ಅಲ್ಲವೇ ಎಂಬ ಕೋಪ ಅವನ ಕಂಗಳಲ್ಲಿ ಉಕ್ಕುತ್ತಲಿತ್ತು. 'ಮತ್ತ ನೀ ಬಗ್ಗಾಕಿಲ್ಲ... ಎಂಗ್ ನಡಿಯುತ್ತೆ ಪಂಗ. ನೀ ಯಾರು ತಿಳ್ಕೊಬೇಕು ತಾನೆ' ಎಂದು ಏರುದನಿಯಲ್ಲಿ ನುಡಿದ ಕೆಂಪಿರೆಡ್ಡಿ, ನಂತರ, 'ಬಗ್ಗಲ್ಲ ಆದ್ರು ಬಸ್ರಿ ಆಗ್ಬೇಕಂತೆ... ಮುಂಡೇದಕ್ಕೆ ಕೊಬ್ಬು' ಎಂದು ಗೊಣಗಿಕೊಳ್ಳುತ್ತ ಮುಂದಡಿಯಿಟ್ಟ. ಶಾರದಮ್ಮ ಮತ್ತೂ ದನಿಯನ್ನು ಎತ್ತರಿಸಿ 'ಏನ್ಲ ಅಂದೆ ಬೇವಾರ್ಸಿ. ನಾ ಯಾಕ್ಲ ನಿಮ್ಗೆ ಕಮಿಷನ್ ಕೊಡ್ಬೇಕು. ಬರೋ ಎಲ್ಡು ಲಕ್ಸದಾಕ ನಿಮಕೇ ಐವತ್ತು ಸಾವಿರ ಕೊಟ್ರೆ ನಾ ಎಂಗ್ಲ ಮನಿ ಕಟ್ಸೋದು' ಎಂದು ಇಡೀ ಊರಿಗೆ ಕೇಳಿಸುವ ಹಾಗೆ ನುಡಿದಳು.

ಆ ಜಿಟಿಜಿಟಿ ಮಳೆ ಹನಿಗಳ ನಡುವಿನಿಂದ ಅವಳ ಸದ್ದು ಇಡೀ ಊರನ್ನು ವ್ಯಾಪಿಸುವ ಹೊತ್ತಿಗೆ ಜೋರು ಮಳೆಯ ಸರುವು ಶುರುವಿಟ್ಟುಕೊಂಡಿತು. ಹತ್ತು ನಿಮಿಷಗಳ ಒಂದೇ ಹದದ ಸರುವು. ಮತ್ತೆ ಜಿಟಿಜಿಟಿ. ಮನೆಗಳ ಮೇಲೆ ಬಿದ್ದ ಮಳೆ